ದಿನಾಂಕ: 01.08.2023

ಅಸಲು ದಾವೆ : 135/2021 ಪಿ.ಡಬ್ಲ್ಯೂ.1

**<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

ಸಾಕ್ಷಿ ಅವರ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿ ಅದರಲ್ಲಿರುವ ಅಂಶಗಳನ್ನು ಓದಿಸಿ ತಿಳಿದುಕೊಂಡು ಹೆಬ್ಬೆಟ್ಟಿನ ಗುರುತನ್ನು ಮಾಡಿರುತ್ತೇನೆಂದು ತಿಳಿಸಿರುತ್ತಾರೆ.

**<u>ಮುಂದುವರೆದ ಮುಖ್ಯ ವಿಚಾರಣೆ : ವಾದಿ ಪರ ವಕೀಲರಾದ ಶ್ರೀ ಎನ್.ಪಿ. ರವರಿಂದ:</u>**

ಕುಟುಂಬದ ವಂಶವೃಕ್ಷವನ್ನು ನಿಪಿ.1 ಎಂದು, 15 ಆರ್.ಟಿ.ಸಿ ಗಳನ್ನು ನಿಪಿ.2 ರಿಂದ ನಿಪಿ.16 ಎಂದು, 3 ಎಂ.ಆರ್. ಎಕ್ಸ್ಟ್ರ್ಯಾಕ್ಟ್ ಗಳನ್ನು ನಿಪಿ.17 ರಿಂದ ನಿಪಿ.19 ಎಂದು

**<u>ಪಾಟೀ ಸವಾಲು : 9 ನೇ ಪ್ರತಿವಾದಿ ಪರ court guardian ಶ್ರೀಮತಿ ಹೆಚ್.ಕೆ.ಎನ್. ರವರಿಂದ</u>**

ಸುಮಾರು 10 ಎಕರೆಗೆ ದಾವೆ ಹೂಡಿರುತ್ತೇನೆ. ಭರತ್ ಗೌಡ ಹೊನ್ನಪ್ಪನ ಮಗ. ಭರತ್‌ಗೌಡ ಅವರಿಗೆ ಆಸ್ತಿಯಲ್ಲಿ ಭಾಗ ಇದೆ ಎಂದರೆ ಸರಿ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಭರತ್‌ಗೌಡ ಅವರ ತಂದೆ ಪ್ರಕಾಶ್ ಅವರಿಗೆ ದಾವಾ ಆಸ್ತಿಗಳಲ್ಲಿ ಹಕ್ಕು ಇದ್ದು , ಅವರು ತೀರಿಕೊಂಡಿದ್ದು ಅವರ ಹಕ್ಕು ಭರತ್‌ಗೌಡಗೆ ಸೇರುತ್ತದೆ ಎಂದರೆ ಸರಿ. ಪ್ರಕಾಶ್ ಹೊನ್ನಪ್ಪನ ಮಗ .ಹೊನ್ನಪ್ಪ , ಕರಿಯಪ್ಪ ಮತ್ತು ಬೇವೂರೇಗೌಡ ನನ್ನ ಒಡಹುಟ್ಟಿದವರು. ಪ್ರಕಾಶ್ ಅವರು ಬೇವೂರೇಗೌಡ ಅವರ ಮಗ . ಬೇವೂರೇಗೌಡ ಅವರಿಗೆ ಒಟ್ಟು 3 ಜನ ಮಕ್ಕಳು. ಅವರ ಪೈಕಿ ಒಬ್ಬ ಮಗ ತೀರಿಕೊಂಡಿರುತ್ತಾನೆ. ಪ್ರಕಾಶ್ ಗೆ ಒಟ್ಟು ಇಬ್ಬರು ಮಕ್ಕಳು.

**ಮರು ವಿಚಾರಣೆ : ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.